**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸೆಷನ್ಸ್ ಕೇಸ್ ನಂಃ 34/2025 ಪಿ.ಡಬ್ಲ್ಯುಃ 10

ಸಿ.ಡಬ್ಲ್ಯುಃ13

| | |
|---|---|
| ಸಾಕ್ಷಿದಾರರ ಹೆಸರು | ಸಂತೋಷ್ |
| ತಂದೆಯ ಹೆಸರು | ಲಿಂಗ ಪೂಜಾರಿ |
| ವಯಸ್ಸು | 44 ವರ್ಷ |
| ಉದ್ಯೋಗ | ಹೆಚ್.ಸಿ. ನಂ 103, ಉಡುಪಿ ನಗರ ಪೊಲೀಸ್ ಠಾಣೆ |
| ವಿಳಾಸ | ಉಡುಪಿ |

ದಿನಾಂಕಃ 03-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ದಿನಾಂಕ 03-03-2025 ರಿಂದ ಇಲ್ಲಿಯವರೆಗೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೊಲೀಸ್ ಪೇದೆಯಾಗಿ ಸೇವೆ ಸಲ್ಲಿಸುತ್ತಿದ್ದೇನೆ.

2) ದಿನಾಂಕ 21-03-2025 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ 2.00 ಗಂಟೆಗೆ ಅಜ್ಜರಕಾಡು ಆಸ್ಪತ್ರೆಯಿಂದ ಬಂದ ಫೋನ್ ಕರೆಯಂತೆ ನಾನು ಅಜ್ಜರಕಾಡಿನ ಸರಕಾರಿ ಆಸ್ಪತ್ರೆಗೆ ಹೋಗಿ, ಅಲ್ಲಿ ಒಳರೋಗಿಯಾಗಿದ್ದ ಚಾಸಾ-1 ಈತನನ್ನು ವಿಚಾರಿಸಿದ್ದೆ,ಆತ ಕೊಟ್ಟ ಲಿಖಿತ ದೂರನ್ನು ಅಲ್ಲಿಯೇ ಪಡೆದಿದ್ದೆ. ಅದನ್ನು ಠಾಣೆಗೆ ತಂದು, ಠಾಣೆಯ ಗುನ್ನೆ ನಂಬ್ರ 53/2025 ಕ್ಕೆ ದಾಖಲಿಸಿದ್ದೆ. ಆ ಪಡೆದಿದ್ದ ದೂರು ಈಗಾಗಲೇ ನಿಶಾನೆ ಪಿ-6 ಆಗಿದ್ದು, ಅದರಲ್ಲಿಯ ನನ್ನ ಸಹಿ ನಿಶಾನೆ ಪಿ-6(ಬಿ). ಆದಿನ ದಾಖಲಿಸಿದ್ದ ಪ್ರಥಮ ವರ್ತಮಾನವನ್ನು ಈಗ ನೋಡಿ ಅದನ್ನು ಈಗ **ನಿಶಾನೆ ಪಿ-20** ಎಂದು ಗುರುತಿಸಿದ್ದೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-20(ಎ) ಎಂದು ಗುರುತಿಸಿದ್ದೇನೆ. ನಂತರ ಮುಂದಿನ ತನಿಖೆಯನ್ನು ಚಾಸಾ-14 ಇವರಿಗೆ ಹಸ್ತಾಂತರಿಸಿದ್ದೆ.

**ಪಾಟೀಸವಾಲುಃ ಆರೋಪಿ ಪರವಾಗಿ ಶ್ರೀ ಆರ್.ಪಿ (ಎಲ್.ಎ.ಡಿ.ಸಿ) ವಕೀಲರಿಂದ**

1) ಆದಿನ ನಮಗೆ ಆಸ್ಪತ್ರೆಯಿಂದ ಬಂದ ಪೋನ್ ನ ಸಮಯ ಸುಮಾರು 1.50. ಅದನ್ನು ನಮ್ಮ ಠಾಣೆಯ ದಿನಚರಿಯಲ್ಲಿ ನಮೂದಿಸಿಲ್ಲ. ನಿಶಾನೆ ಪಿ-6 ರಲ್ಲಿಯ ಕೈಬರಹ ಯಾರದ್ದು ಎಂದು ಗೊತ್ತಿಲ್ಲ. ಚಾಸಾ-2 ಇವರಿಗೆ ಪೆಟ್ಟಾಗಿದ್ದ ಬಗ್ಗೆ ನಿಶಾನೆ ಪಿ-6 ರಲ್ಲಿ ತಿಳಿಸಿಲ್ಲ. ನಿಶಾನೇ ಪಿ-6 ರಲ್ಲಿ ಘಟನೆ ನಡೆದಾಗ ಅಲ್ಲಿ ಬೆಳಕಿನ ವ್ಯವಸ್ಥೆ ಇದ್ದ ಬಗ್ಗೆ ಹೇಳಿಲ್ಲ. ನಿಶಾನೆ ಪಿ-6 ರ ಸಮಯದಲ್ಲಿ ಯಾವುದೇ ಮುದ್ದೆಮಾಲುಗಳನ್ನು ಜಪ್ತು ಮಾಡಿಲ್ಲ. ನಿಶಾನೆ ಪಿ-6 ರ ಘಟನೆ ಒಂದೇ ಜಾಗದಲ್ಲಿ ನಡೆದಿದೆ.

2) ಗಾಯಾಳು ಮತ್ತು ಆರೋಪಿಗೆ ಈ ಮೊದಲು ಪರಿಚಯ ಇದ್ದ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. ಗಾಯಾಳುವಿಗೆ ಆರೋಪಿಯ ಹೆಸರನ್ನು ಯಾರು ಹೇಳಿದ್ದಾರೆಂದು ಗೊತ್ತಿಲ್ಲ. ಚಾಸಾ-1, ನಿಪಿ-6 ರಂತೆ ನನ್ನ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-6 ರ ದೂರನ್ನು ನಾನು ನಿಶಾನೆ ಪಿ-20 ರ ದಾಖಲೆಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ಚಾಸಾ-1, ನಿಪಿ-6 ರ ದೂರು ಬರೆಯುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-6, ಚಾಸಾ-1 ಇವರ ಕೈಬರಹದಲ್ಲಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು, ನಿಪಿ-6 ರ ದೂರನ್ನು ಸೃಷ್ಟಿಸಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.